**ಸಾಕ್ಷಿಯನ್ನು ದಿ:01.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಪುಟ್ಟತಾಯಮ್ಮ ರವರಿಗೆ ಸ.ನಂ.18/3 ರಲ್ಲಿ 1 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸರಿ.

2. ದಾವಾ ಚಕ್ಕುಬಂದಿಯಲ್ಲಿ 1 ಎಕರೆ 20 ಗುಂಟೆ ಜಮೀನು ಪುಟ್ಟತಾಯಮ್ಮ ನವರ ಹೆಸರಿನಲ್ಲಿ ಇದೆ ಎಂದರೆ ಸರಿ.

3. ಪುಟ್ಟತಾಯಮ್ಮ ರವರ ಜಮೀನು ಬಿಟ್ಟು ರುದ್ರಪ್ಪ ಹಾಗೂ ರೂಪಾ ರವರ ಜಮೀನು ನಂತರ ನನ್ನ ಜಮೀನು ಇದೆ. ನನ್ನ ಜಮೀನ ಪೂರ್ವಕ್ಕೆ ಪುಟ್ಟತಾಯಮ್ಮ ನವರ ಜಮೀನು ಇದೆ.

4. ನನಗೆ 2003 ರಲ್ಲಿ ಜಮೀನು ಮಂಜೂರಾಗಿದೆ.

5. ಪುಟ್ಟತಾಯಮ್ಮ ನವರ ಜಮೀನಿನ ಪಕ್ಕ ರುದ್ರಪ್ಪ ರವರ ಜಮೀನು ನಂತರ ನನ್ನ ಜಮೀನು ಇದೆ.

6. 2003 ರಲ್ಲಿ ಮಂಜೂರಾಗಿದನಿಂದಲೂ ನಿಮ್ಮ ಜಮೀನಿನ ಸ್ಥಿತಿ ಹಾಗೂ ಪುಟ್ಟತಾಯಮ್ಮ ನವರ ಜಮೀನಿನ ಸ್ಥಿತಿ ಹಾಗೆ ಇವೆ ಎಂದರೆ ಸರಿ. ಪುಟ್ಟತಾಯಮ್ಮ ನವರು ಬೇಲಿ ಹಾಕಿಕೊಂಡಿದ್ದಾರೆ.

7. ನಿಮ್ಮ ಜಮೀನಿನ ಪೂರ್ವಕ್ಕೆ ಪುಟ್ಟತಾಯಮ್ಮ ನವರ ಜಮೀನು ಇದೆ ಎಂದು ವಕೀಲರಿಗೆ ತಿಳಿಸಿದ್ದೀರಾ ಎಂದರೆ, ಇಲ್ಲ.

8. ನಿಮ್ಮ ಜಮೀನು, ರುದ್ದಪ್ಪ ರವರ ಜಮೀನು ಹಾಗೂ ಪುಟ್ಟತಾಯಮ್ಮ ನವರ ಜಮೀನು ತಾಗಿಕೊಂಡಂತೆ ಒಂದು ಡಾಂಬರ್ ರಸ್ತೆ ಇದೆ ಎಂದರೆ, ಇಲ್ಲ ಪುಟ್ಟತಾಯಮ್ಮ ನವರ ಜಮೀನಿನಲ್ಲಿ ಮಾತ್ರ ಇದೆ.

9. ಸದರಿ ರಸ್ತೆಯ ಮೇಲೆ ಸ.ನಂ.18 ಕ್ಕೆ ಓಡಾಡಲು ತೊಂದರೆ ಇಲ್ಲ. ಸ.ನಂ.17 ಕ್ಕೆ ಓಡಾಡಲು ತೊಂದರೆ ಆಗುತ್ತಿದೆ. ಪುಟ್ಟತಾಯಮ್ಮ ನವರ ಸ.ನಂ.18 ರ ಮೇಲೆ ನಾವು ಹೋಗಬೇಕು.

10. ರುದ್ರಪ್ಪ ನವರದು ಸಹ ಸ.ನಂ.18. ನಮ್ಮದು ಸ.ನಂ.17. ಆ ಬಗ್ಗೆ ಸಾಗುವಳಿ ಹಾಜರುಪಡಿಸಿದ್ದೇನೆ.

11. ಸ.ನಂ.17 ಕ್ಕೆ ಹಾಗೂ ಡಾಂಬರ್ ರಸ್ತೆಗೆ ಎಷ್ಟು ದೂರ ಇದೆ ಎಂದರೆ, 3 ಎಕರೆ ದಾಟಿ ಹೋಗಬೇಕು ಎಂದು ನುಡಿಯುತ್ತಾರೆ.

12. ಪುಟ್ಟತಾಯಮ್ಮ ನವರ ಜಮೀನಲ್ಲಿ ಖರಾಬು ಇರುವ ಬಗ್ಗೆ ದಾಖ್ಲೆ ಹಾಜರುಪಡಿಸಿದ್ದೀರಾ ಎಂದರೆ, ಇಲ್ಲ.

13. ನೀವು ಸ.ನಂ.18 ರಲ್ಲಿ 1 ಎಕರೆ 20 ಗುಂಟೆ ಜಮೀನು ಇದ್ದು, ಅದಕ್ಕೆ ಹೋಗಲು ತೊಂದರೆ ಆಗುತ್ತಿದೆ ಎಂದು ನಿಮ್ಮ ವಕೀಲರಿಗೆ ಹೇಳಿದ್ದೀರಾ ಎಂದರೆ, ಸ.ನಂ.18 ಕ್ಕೆ ನನಗೆ ಯಾವುದೇ ತೊಂದರೆ ಇಲ್ಲ.

14. ಸ.ನಂ.17 ಕ್ಕೆ ಹೋಗಲು ಇರುವ ರಸ್ತೆಗೆ ಬೇಲಿ ಹಾಕಿಕೊಂಡಿದ್ದಾರೆ. ಸ.ನಂ.17 ಕ್ಕೆ ಹೋಗಲು ಮುಂಚೆ ಪುಟ್ಟತಾಯಮ್ಮ ನವರ ಜಮೀನು ಸಿಗುತ್ತದೆ. ನಂತರ ರೂಪಾ ಹಾಗೂ ರುದ್ರಪ್ಪ ನವರ ಜಮೀನು. ರೂಪಾ ಹಾಗೂ ರುದ್ರಪ್ಪನವರು ಬೇಲಿ ಹಾಕಿದ್ದಾರಾ ಎಂದರೆ, ಇವರು ಬಿಟ್ಟರೆ ಅವರು ಬಿಡುತ್ತಾರೆ.

15. ವಾದಿಗೆ 1 ಎಕರೆ 20 ಗುಂಟೆ ಬಿಟ್ಟರೆ ಬೇರೆ ಜಮೀನು ಇಲ್ಲ ಎಂದರೆ ಸರಿ.

16. ಪುಟ್ಟತಾಯಮ್ಮ ನವರ ಪಹಣಿಯನ್ನು ನಾನು ನೋಡಿದ್ದೀರಾ ಎಂದರೆ, ಕೊಟ್ಟಿದ್ದೇನೆ.

17. ನನಗೆ ಓದಲು ಬರೆಯಲು ಬರುವುದಿಲ್ಲ. 1

18. ಪುಟ್ಟತಾಯಮ್ಮ ನವರ ಸ.ನಂ.18 ರ ಪಹಣಿಯಲ್ಲಿ ದಾವಾ ಆಸ್ತಿಯಲ್ಲಿ ಯಾವುದೇ ಖರಾಬು ಇಲ್ಲ ಎಂದರೆ, 5 ಎಕರೆ 12 ಗುಂಟೆ ಖರಾಬು ಇದೆ.

19. ನನ್ನ ಪತಿಯ ಹೆಸರು ಮೋಹನ. ಅವರು ಮೃತರಾಗಿ ಈಗ 5 ವರ್ಷವಾಯಿತು.

20. ಸ.ನಂ.17 ರ ಪೂರ್ವಕ್ಕೆ: ಮಂಜುಳಮ್ಮ ನವರ ಜಮೀನು, ಪಶ್ಚಿಮಕ್ಕೆ: ಸ್ವಾಮಿಶೇಖರಪ್ಪ ಹಾಗೂ ಮಹಾದೇವಪ್ಪ, ಉತ್ತರಕ್ಕೆ: ಮಂಜುಳಮ್ಮ ಹಾಗೂ ರೇವಣ್ಣ ಹಾಗೂ ಪ್ರೇಮಮ್ಮ, ದಕ್ಷಿಣಕ್ಕೆ: ರುದ್ರಸ್ವಾಮಿ.

21. ನಿಮಗೆ ಮಂಜೂರಾದ ಸಾಗುವಳಿಯಲ್ಲಿ ಯಾವುದೇ ದಿಕ್ಕಿನಲ್ಲೂ ರಸ್ತೆ ಇಲ್ಲ ಎಂದರೆ ಸರಿ.

22. ನೀವು ತಿರುಗಾಡಲು ತೊಂದರೆ ಕೊಡುತ್ತಿದ್ದಾರೆ ಎಂದು ರಸ್ತೆಗಾಗಿ ನಾನು ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಹಾಕಿಲ್ಲ ಎ.ಸಿ ನ್ಯಾಯಾಲಯದಲ್ಲಿ ಹಾಕಿದ್ದೇನೆ.

23. ನೀವು ಸುಮಾರು ಪ್ರೋನೋಟ್ ಹಾಗೂ ಚೆಕ್ ಕೇಸ್ ಗಳಲ್ಲಿ ನ್ಯಾಯಾಲಯಕ್ಕೆ ಬರುತ್ತೀರಾ ಎಂದರೆ, ಒಂದು ಬಾರಿ ಬಂದಿದ್ದೇನೆ.

24. ವಾದಿಗೆ ತೊಂದರೆಯಾಗಲಿ ಎಂದು ಅವರ ಜಮೀನಿನಲ್ಲಿ ರಸ್ತೆ ಬೇಕು ಎಂದು ತೊಂದರೆ ನೀಡಿದ್ದಕ್ಕೆ ಈ ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

25. ನಿಮಗೆ ಸ.ನಂ.17 ಕ್ಕೆ ಹೋಗಲು ಡಾಂಬರ್ ರಸ್ತೆ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

26. ನೀವು ವಾದಿಯ ಆಸ್ತಿಯಲ್ಲಿ 5 ಗುಂಟೆ ಖರಾಬು ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

27. ನೀವು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಹಾಜುಪಡಿಸಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ